# ಕರ್ನಾಟಕ ಸರ್ಕಾರ

ಸಂ. ವಇ 86 ಹೆಚ್‌ಎಎಮ್ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 24ನೇ ಸೆಪ್ಟೆಂಬರ್ 2010

G-13776

ರಾ.ಗಾಂ.ಗ್ರಾ.ವ.ನಿ.ನಿ.
ಬೆಂಗಳೂರು
ಸ್ವೀಕೃತಿ

ಇವರಿಂದ

ಸರ್ಕಾರದ ಕಾರ್ಯದರ್ಶಿಯವರು,
ವಸತಿ ಇಲಾಖೆ, ವಿಕಾಸ ಸೌಧ,
ಬೆಂಗಳೂರು 560 001.

ಇವರಿಗೆ

ವ್ಯವಸ್ಥಾಪಕ ನಿರ್ದೇಶಕರು,
ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿ.,
ಬಂಡೇಮಠ, ಕೆಂಗೇರಿ, ಬೆಂಗಳೂರು 560 060.

ಮಾನ್ಯರೆ,

ವಿಷಯ: ಬಸವ-ಇಂದಿರಾ ವಸತಿ ಯೋಜನೆಯಡಿ ಹೆಚ್ಚುವರಿ ಗುರಿ ನಿಗದಿಪಡಿಸುವ ಬಗ್ಗೆ.
ಉಲ್ಲೇಖ: ನಿಮ್ಮ ಪತ್ರ ಸಂ.ಪಿಐ ಆರ್‌ಜಿಆರ್‌ಹೆಚ್‌ಸಿಎಲ್ 01 ಬಿಐಎಸ್ 07 2010
ದಿನಾಂಕ 17.09.2010

***

ಬಸವ-ಇಂದಿರಾ ವಸತಿ ಯೋಜನೆಯಡಿ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಗುಡಿಸಲುವಾಸಿಗಳಿಗೆ ನಿರ್ಮಿಸಬಹುದಾದ ಮನೆಗಳ ಸಂಖ್ಯೆಯು 1,000ಕ್ಕಿಂತ ಕಡಿಮೆ ಇದ್ದಲ್ಲಿ, ಆ ಮನೆಗಳ ನಿರ್ಮಾಣವನ್ನು ಕೂಡಲೇ ಕೈಗೆತ್ತಿಕೊಳ್ಳುವಂತೆ ಹಾಗೂ ಒಂದು ವೇಳೆ ಈ ಸಂಖ್ಯೆಯು 1,000ಕ್ಕಿಂತ ಹೆಚ್ಚಾಗಿದ್ದ ಪಕ್ಷದಲ್ಲಿ 1,000ಕ್ಕಿಂತ ಹೆಚ್ಚಿನ ಸಂಖ್ಯೆಯ ಮನೆಗಳ ನಿರ್ಮಾಣವನ್ನು ಮುಂದಿನ ಹಂತದಲ್ಲಿ ಕೈಗೊಳ್ಳಲು ಸರ್ಕಾರದ ಸುತ್ತೋಲೆ ಸಂ. ವಇ 86 ಹೆಚ್‌ಎಎಮ್ 2009 ದಿನಾಂಕ 7.07.2010ರ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈಗ ದಿನಾಂಕ 17.09.2010ರ ಉಲ್ಲೇಖಿತ ಪತ್ರದಲ್ಲಿ, ಗುಡಿಸಲುವಾಸಿಗಳ ಮರುಸಮೀಕ್ಷೆಯ ಮೇರೆಗೆ ರಾಜ್ಯದಲ್ಲಿನ ಗುಡಿಸಲುವಾಸಿಗಳ ಸಂಖ್ಯೆ ದ್ವಿಗುಣವಾಗುವ ಸಂಭವವಿರುವುದಾಗಿ ಕಂಡುಬಂದಿರುವುದರಿಂದ, 2010-11ನೇ ಸಾಲಿನಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಗುಡಿಸಲುವಾಸಿಗಳಿಗೆ ನಿಗದಿಪಡಿಸಿದ 1,000 ಮನೆಗಳಿಗೆ ಹೆಚ್ಚುವರಿಯಾಗಿ ಇನ್ನೂ 1,000 ಹೆಚ್ಚುವರಿ ಮನೆಗಳ ಗುರಿಯನ್ನು ನಿಗದಿಪಡಿಸುವಂತೆ ಪ್ರಸ್ತಾಪಿಸಲಾಗಿರುತ್ತದೆ.

ಈಗಾಗಲೇ, ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಗುಡಿಸಲುವಾಸಿಗಳಿಗೆ 1,000 ಮನೆಗಳ ನಿರ್ಮಾಣಕ್ಕಾಗಿ ಆಯ್ಕೆ ಪ್ರಕ್ರಿಯೆ ಚಾಲನೆಯಲ್ಲಿದ್ದು, ಇನ್ನೂ ಹೆಚ್ಚು ಸಂಖ್ಯೆಯ ಅರ್ಹ ಫಲಾನುಭವಿಗಳು ಕಂಡುಬಂದಲ್ಲಿ, ಆಯಾ ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚುವರಿಯಾಗಿ 1,000 ಮನೆಗಳ ನಿರ್ಮಾಣಕ್ಕಾಗಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದಾಗಿದೆ. ಆಯ್ಕೆ ಪ್ರಕ್ರಿಯೆಗೆ ಸ್ವಲ್ಪ ಸಮಯಾವಕಾಶದ ಅವಶ್ಯಕತೆ ಇದ್ದು, ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಲ್ಲಿ ಈಗಾಗಲೇ ಬಿಡುಗಡೆ ಮಾಡಿರುವ ಹಣದ ಲಭ್ಯತೆಗನುಗುಣವಾಗಿ ಮನೆಗಳ ನಿರ್ಮಾಣ ಕೈಗೊಳ್ಳಬಹುದಾಗಿದೆಯೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,
K. Vallur 24/09
(ಕೆ. ಆರ್. ವಲ್ಲೂರ)
ಪೀಠಾಧಿಕಾರಿ-2, ವಸತಿ ಇಲಾಖೆ.

(ಕಾರ್ಯದರ್ಶಿಯವರಿಂದ
ಅನುಮೋದಿಸಲ್ಪಟ್ಟಿದೆ.)

M.S. 27-9-10
AM-P1
27/9/10.
p.o.